# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.164/2015

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸರೋಜಮ್ಮ | ಸಿಡಬ್ಲ್ಯೂ-1 | ಪಿಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | ಶಿವಶರಣಪ್ಪ | | |
| ವಯಸ್ಸು | 65 ವರ್ಷ | | |
| ಉದ್ಯೋಗ | ಕೂಲಿ ಕೆಲಸ | | |
| ವಾಸ ಸ್ಥಳ | ಸೇಡಂ | | |

ದಿನಾಂಕ 07-08-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಪಿರ್ಯಾದು ಆಗಿದ್ದು ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ದಾಖಲೆಯ ಮೇಲೆ ಇರುವ ಸಹಿ ಯನ್ನು ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದರ ಮೇರೆಗೆ ಸಹಿಯನ್ನು ನಿ ಪಿ 1 (ಎ) ಎಂದು ಗುರುತಿಸಲಾಯಿತು. ಆರೋಪಿತರ ಪರಿಚಯ ಇದೆ. ಪೋಲೀಸರ ಹೇಳಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಕಳೆದ 9 ವರ್ಷಗಳ ಹಿಂದೆ ಆರೋಪಿತರಿಗೂ ನಮಗೂ ಜಗಳ ಆಗಿತ್ತು. ನಾವು ತೊಗರಿ ಬೆಳೆ ಬೆಳೆದಿದ್ದೆವು ಅದು ಅಂದಾಜು ಒಂದು ಫೀಟು ಅಷ್ಟು ಎತ್ತರಕ್ಕೆ ಬೆಳೆದಿತ್ತು. ಆರೋಪಿತರು ನಮ್ಮ ಹೊಲದಲ್ಲಿ ತಮ್ಮ ಹೊಲ ಅಂದುಕೊಂಡು ತೊಗರಿಬೇಳೆಗೆ ಎಣ್ಣೆ ಹೊಡೆದಿರುತ್ತಾರೆ. ಎಣ್ಣೆ ಹೊಡೆ ದಿದರಿಂದ ನಮ್ಮ ಬೆಳೆ ನಾಶವಾಗಿತ್ತು. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 12-08-2014 ರಂದು ಹೊಲಕ್ಕೆ ಬಂದಾರಿಗೆ ಮುಳ್ಳು ಹಚ್ಚಿ ಬರಲ್ಲ ಅಂತ ಹೊಗಿ ಕೂಲಿ ಆಳು ಗಳಿಂದ ಬಂದಿದ್ದು ಇತ್ತು ಎಂದರೆ ಸರಿ. 14-08-2014 ರಂದು ಮಧ್ಯಾಹ್ನ 01-00 ಗಂಟೆಗೆ ಮೂಡಲು ಗಟ್ಟಿ ಹೋಲದ ಸರ್ವೆ ಸಂಖ್ಯೆ 642, ಆರೋಪಿತರು ನಮ್ಮ ಹೋಲದಲ್ಲಿ ಅಕ್ರಮ ಪ್ರವೇಶ ಮಾಡಿ ಒಂದು ಕಳೆ ನಾಶಕವನ್ನು ಬೆಳೆಗೆ ಸಿಂಪಡಿಸಿರುತ್ತಾರೇ ಎಂದರೆ ಸರಿ. ನಾನು ಹೋಗಿ

ಕೇಳಲಾಗಿ ಆರೋಪಿ 1 ರವರು ರಂಡಿ ನಾನು ನಿನ್ನ ಹೋಲ ಬೆಳೆಯಲು ಬಿಡುವುದಿಲ್ಲ ಎಣ್ಣೆ ಹೊಡೆದು ನಾಶ ಮಾಡುತ್ತೇವೆ ಏನು ಮಾಡುತ್ತಿ ಮಾಡಿಕೋ ಹೋಗು ಅಂತ ಅವಾಚ್ಯವಾಗಿ ಬೈದಿದ್ದರು ಎಂದರೆ ಸರಿ ಮತ್ತು ನನ್ನನ್ನು ಸುಟ್ಟು ಸಾಯಿಸಿಬಿಡುತ್ತೇವೆಸ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನನ್ನ ತಂಗಿಗೆ ವಿಚಾರಣೆ ಮಾಡಿ ದಿ. 25-08-2014 ರಂದು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಎಂದರೆ ಸರಿ.

(ಮು ಮಾ ನ್ಯಾಯಾಲಯಕ್ಕೆ ಜಮಾ ಮಾಡಿಲ್ಲದ ಕಾರಣ, ಮು ಮಾ ನ್ನು ಗುರುತಿಸುವಿಕೆಗಾಗಿ ಸ ಸ ಅ ರವರು ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲು ಕೋರಿದ್ದು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ. ದ. ನ್ಯಾ ದಂ. ಸೇಡಂ.

Accused are present. CW-1 examined as PW-1. And got marked Ex. p-1. Learned APP prays time for further chief of PW-1 for marking of material object. Time granted. Reissue WS to CW-2, 3, 4.
Call on 12-09-2024

**JMFC, Sedam.**